781(331) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ(ಬ್ಯಾಡಗಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004–05ನೇ ಸಾಲಿಗೆ ಅನ್ವಯವಾಗುವಂತೆ ರೈತರ ವಿದ್ಯುತ್ ಪಂಪ್‌ಸೆಟ್‌ಗಳ ಮೇಲಿನ ಬಾಕಿ ಹಣವನ್ನು ಮನ್ನಾ ಮಾಡುವ ವಿಚಾರ ಸರ್ಕಾರಕ್ಕಿದೆಯೇ;

ಆ) ಸದರಿ ಸಾಲಿಗೆ ಅನ್ವಯವಾಗುವಂತೆ ರೈತರಿಂದ ಬರಬೇಕಾಗಿರುವ ವಿದ್ಯುತ್ ಬಾಕಿ ಹಣದ ಮೊತ್ತ ಎಷ್ಟು ;

ಇ) ನೀರಾವರಿ ಸೌಲಭ್ಯವಿಲ್ಲದೇ ಈ ಪಂಪ್‌ಸೆಟ್ ಬಳಕೆ ಮಾಡದೇ ಕನಿಷ್ಠ ದರವನ್ನು ವಿಧಿಸುತ್ತಿರುವುದು ಸಮಂಜಸವೇ ;

ಈ) ಈ ರೀತಿ ಬಳಕೆ ಮಾಡದ ಅವಧಿಗೆ ಕನಿಷ್ಠ ದರವನ್ನು ವಿಧಿಸದಿರಲು ಸರ್ಕಾರದವರು ಕ್ರಮ ಜರುಗಿಸುವರೇ ;

ಉ) ಓವೈಟಿ ಯೋಜನೆಯನ್ನು ರದ್ದುಪಡಿಸಿ ರೂ.15 ಸಾವಿರಗಳನ್ನು ಠೇವಣಿಯಾಗಿ ಪಾವತಿಸುವ ಕ್ರಮವು ರೈತರಿಗೆ ಅಧಿಕ ಹೊರೆಯಾಗುವುದಿಲ್ಲವೇ ;

ಊ) ಹಾಗಿದ್ದಲ್ಲಿ, 15 ಸಾವಿರ ಠೇವಣಿಯ ಬದಲು 5 ಸಾವಿರ ಠೇವಣಿಯನ್ನು ಪಾವತಿಸುವ ಮೂಲಕ ಬಡ ರೈತರಿಗೆ ಅನುಕೂಲವಾಗುವಂತೆ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು) :

ಅ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಸದರೀ ಸಾಲಿಗೆ (2004–05) ಅನ್ವಯವಾಗುವಂತೆ ಏಪ್ರಿಲ್ 04ರಿಂದ ಡಿಸೆಂಬರ್ 04ರ ಅಂತ್ಯದವರೆಗೆ ನೀರಾವರಿ ಪಂಪುಸೆಟ್ಟು ಬಳಕೆದಾರರಿಂದ ಬರಬೇಕಾಗಿರುವ ವಿದ್ಯುತ್ ಬಾಕಿ ಮೊತ್ತ 383.7 ಕೋಟಿ ರೂ.ಗಳು. ಇದಲ್ಲದೇ 2003–04ರ ಸಾಲಿನಲ್ಲಿ ಬರಬೇಕಾಗಿದ್ದ ಬಾಕಿಯ ಮೊತ್ತ 395.9 ಕೋಟಿ ರೂ. ಈ ಮೊತ್ತವನ್ನೂ ಪರಿಗಣಿಸಿದಲ್ಲಿ ರೈತರ ನೀರಾವರಿ ಪಂಪುಸೆಟ್ಟುಗಳಿಂದ 31–12–2004ರ ಅಂತ್ಯದಲ್ಲಿದ್ದಂತೆ ಬರಬೇಕಾಗಿದ್ದ ವಿದ್ಯುತ್ ಬಾಕಿಯ ಒಟ್ಟು ಮೊತ್ತ 779.60 ಕೋಟಿ ರೂ.ಗಳು.

ಇ) ವಿದ್ಯುತ್ ಸರಬರಾಜು ಕಂಪನಿಗಳು ಒಬ್ಬ ಬಳಕೆದಾರನಿಗೆ ವಿದ್ಯುಚ್ಛಕ್ತಿ ಒದಗಿಸಲು ಮಾರ್ಗ ವಿಸ್ತರಣೆ ಮುಂತಾದ ಕಾರ್ಯಗಳಿಗೆ ಸಾಮಗ್ರಿಗಳನ್ನು ಖರೀದಿಸಲು ಬಂಡವಾಳ ಹೂಡಿಕೆ ಮಾಡಬೇಕಾಗಿರುತ್ತದೆ ಮತ್ತು ವಿತರಣಾ ವ್ಯವಸ್ಥೆಯ ನಿರ್ವಹಣಾ ಕಾರ್ಯಗಳಿಗೂ ಸಹ ಕರ್ಚು ಮಾಡಬೇಕಾಗುತ್ತದೆ. ಒಬ್ಬ ಗ್ರಾಹಕ ವಿದ್ಯುಚ್ಛಕ್ತಿ ಉಪಯೋಗಿಸಲಿ ಅಥವಾ ಉಪಯೋಗಿಸದೇ ಇದ್ದರೂ ಸಹಾ ಆತನ ವಿದ್ಯುತ್ ಲೈನನ್ನು ನಿರ್ವಹಣೆ ಮಾಡುವುದು ಅನಿವಾರ್ಯವಾಗಿರುತ್ತದೆ. ಆದುದರಿಂದ, ಈ ಸಂಬಂಧ ಹಣ ಖರ್ಚು ಮಾಡಲೇಬೇಕಾಗುತ್ತದೆ. ಇಂತಹ ವೆಚ್ಚದ ಭಾಗಶಃ ಹಣವನ್ನು ಮಾತ್ರ ಕನಿಷ್ಠ ದರದ ರೂಪದಲ್ಲಿ ಕರ್ನಾಟಕ ಹಣವನ್ನು ಮಾತ್ರ ಕನಿಷ್ಠ ದರದ ರೂಪದಲ್ಲಿ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿರುವ ಪ್ರಕಾರ ಗ್ರಾಹಕರಿಂದ ವಸೂಲಿ ಮಾಡಲಾಗುತ್ತಿದೆ. ಇದು ರೈತರ ಪಂಪುಸೆಟ್ಟುಗಳಿಗೂ ಅನ್ವಯವಾಗುತ್ತದೆ.

ಉ) ಓ.ವೈ.ಟಿ. ಯೋಜನೆಯನ್ನು ರದ್ದುಪಡಿಸಿರುವುದಿಲ್ಲ. ಈಗಲೂ ಚಾಲ್ತಿಯಲ್ಲಿದೆ. ಈ ಯೋಜನೆಯಡಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಭಾವಿ ನೀರಾವರಿ

ಪಂಪುಸೆಟ್ಟು ಬಳಕೆದಾರರು ರೂ.25,000/–ಗಳನ್ನು ಪಾವತಿಸಬೇಕಾಗಿರುತ್ತದೆ. ಇದನ್ನು ತುಂಬಲು ರೈತರಿಗೆ ಕಷ್ಟಕರವಾಗುತ್ತಿದೆಯೆಂದು ಹಲವಾರು ಸಂದರ್ಭಗಳಲ್ಲಿ ಜನ ಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದಿರುತ್ತಾರೆ ಈ ಹಿನ್ನೆಲೆಯಲ್ಲಿ 'ಓವೈಟಿ' ಯೋಜನೆಗೆ ಪರ್ಯಾಯವಾಗಿ ಇನ್ನೊಂದು ಹೊಸ ಪ್ರಸ್ತಾವನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಮೇಲ್ಕಂಡ ಪ್ರಸ್ತಾವನೆಯ ಬಗ್ಗೆ ತೆಗೆದುಕೊಳ್ಳಲಾಗುವ ತೀರ್ಮಾನದ ಪ್ರಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

784(696) ಶ್ರೀ ಪದ್ಮನಾಭ ಕೊಟ್ಟಾರಿ. ಕೆ.(ವಿಟ್ಲ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ವೆ ಇಲಾಖಾ ಕೆಲಸ ಕಾರ್ಯಗಳು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರ ವ್ಯಾಪ್ತಿಯಲ್ಲಿ ಇರುವಂತೆ ಮಾಡಿದಲ್ಲಿ ಜನರಿಗೆ ಉಂಟಾಗುವ ಅನುಕೂಲತೆಗಳ ಬಗ್ಗೆ ಸರ್ಕಾರ ಚಿಂತಿಸಿದೆಯೇ;

ಆ) ತಹಸೀಲ್ದಾರರ ವ್ಯಾಪ್ತಿಯಲ್ಲೇ ಈ ಕಾರ್ಯ ಚಟುವಟಿಕೆಗಳು ಜರುಗಿದರೆ ಜನರಿಗೆ ಬಹಳಷ್ಟು ಅನುಕೂಲತೆಗಳು ಒದಗಿ ಬರುವುದಲ್ಲದೆ, ಸರ್ಕಾರಕ್ಕೂ ಕಾರ್ಯನಿರ್ವಹಣೆಯಲ್ಲಿ ಅನುಕೂಲವಾಗುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರದ ನಿಲುವುಗಳೇನು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು

ಆ) ಹೌದು

ಇ) ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ತನ್ನ ಅಂತಿಮ ವರದಿಯಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಒಂದೇ ಸೂರಿನಡಿಯಲ್ಲಿ ಒಬ್ಬರೇ ಅಧಿಕಾರಿಯಿಂದ ಅನುಮೋದಿಸಲ್ಪಟ್ಟ ವಿವಿಧ ಭೂದಾಖಲೆಗಳನ್ನು ಒದಗಿಸುವುದು ಮತ್ತು ಕ್ಷೇತ್ರ ಮಟ್ಟದಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯನ್ನು ಕಂದಾಯ ಇಲಾಖೆಯೊಂದಿಗೆ ಕಾರ್ಯ ವಿಲೀನಗೊಳಿಸಿ ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ತರುವಂತೆ ಶಿಫಾರಸ್ಸು ಮಾಡಿದ್ದು ಅದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

786(519) ಶ್ರೀ ಪಾಟೀಲ್ ಬಿ.ಸಿ.(ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004–2005ನೇ ಸಾಲಿನವರೆಗೆ ರಾಷ್ಟ್ರೀಯ ಭದ್ರತಾ ಯೋಜನೆಯಡಿಯಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ ಅರ್ಜಿಗಳೆಷ್ಟು ಹಾಗೂ ಯಾವ ಸಾಲಿನಿಂದ ಅವು ಬಾಕಿ ಉಳಿದಿವೆ.

ಆ) ಈ ಯೋಜನೆಯಡಿಯಲ್ಲಿ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡದಿರಲು ಕಾರಣವೇನು.

ಇ) ಯಾವಾಗ ಮತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು ?